ಓ ಎಸ್ ನಂ.37/2016

ಡಿ ಡಬ್ಲ್ಯೂಃ 1

**ದಿ. 13-06-2019 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಸಿ.ಬಿ ವಕೀಲರಿಂದಃ**

ನಾನು ನನ್ನ ವಿಚಾರಣೆಯ ಬದಲಾಗಿ ಪ್ರಮಾಣಪತ್ರ ವನ್ನು ಸಲ್ಲಿಸಿರುತ್ತೇನೆ. ಪ್ರಮಾಣಪತ್ರ ದಲ್ಲಿರುವ ಅಂಶವನ್ನು ನಾನೇ ಹೇಳಿ ಬರೆಸಿ ಸಹಿ ಹಾಕಿರುತ್ತೇನೆ. ಅದರಲ್ಲಿನ ಅಂಶಗಳು ಸತ್ಯವಾಗಿರುತ್ತವೆ. ನ್ಯಾಯಾಲಯದ ಮುಂದೆ ಸಲ್ಲಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ.

ದಿ.10.12.1988 ರ ಪಾಲುಪಾರಿಕತ್ತನ್ನು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಯು ನೊಂದಾಯಿತವಲ್ಲದ ದಾಖಲೆ ಅಗಿದ್ದು ಸದರಿ ದಾಖಲೆಯನು ಇತರೆ ವ್ಯವಹಾರ ಸಾಭೀತು ಪಡಿಸಲು ಸಾಕ್ಷ್ಯದಲ್ಲಿ ಪರಿಗಣಿಸ ಬಹುದಾಗಿರುವುದರಿಂದ ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ನನ್ನ ತಂದೆಯ ಹೆಬ್ಬೆಟ್ಟಿನ ಗುರುತು ಇುರತ್ತದೆ. ಸದರಿ ದಾಖಲೆಗೆ ನಾನು ಮತ್ತು 2 ನೇ ಪ್ರತಿವಾದಿ ಸಹಿ ಮಾಡಿರುತ್ತೇವೆ . ಸಾಕ್ಷಿ ಸದರಿ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಡಿ-1(ಎ) ಮತ್ತು 1(ಬಿ) ಎಂದು ಗುರುತಿಸಲಾಯಿತು. ನನ್ನ ತಂದೆಯ ಹೆಬ್ಬೆಟ್ಟನ್ನು ಕೆ.ಈಶ್ವರಪ್ಪ ಎಂಬುವವರು ಗುರುತಿಸಿರುತ್ತಾರೆ.

ದಿ.09.11.2011 ರ 2 ಕ್ರಯಪತ್ರ ಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿಡಿ -2 ಮತ್ತು 3 ಎಂದು ಗುರುತಿಸಲಾಯಿತು. ನನ್ನ ತಂದೆ ಬರೆದಿರುವ ವಿಲ್ ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ-4 ಎಂದು ಗುರುತಿಸಲಾಯಿತು. ಋಣಭಾರ ಪ್ರಮಾಣ ಪತ್ರ ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ-5 ಎಂದು ಗುರುತಿಸಲಾಯಿತು. 18 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿಡಿ-6 ರಿಂದ 23 ಎಂದು ಗುರುತಿಸಲಾಯಿತು. ನನ್ನ ತಂದೆಯ ಕೈಲಾಸ ಶಿವಗಣರಾಧನೆಯ ಪತ್ರಿಕೆ ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ-24 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ವಾದಿಯರು ಮತ್ತು ವಾದಿ ಪರ ವಕೀಲರು ಗೈರು ಹಾಜರುಇರುವುದಿಸರಿಂದ ಪಾಟೀ ಸವಾಲು ಇಲ್ಲಎಂದು ತೆಗೆದುಕೊಳ್ಳಲಾಯಿತು.

(ತೆ.ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಪ್ರಧಾನ ಸಿವಿಲ್ ಮತ್ತು ಜೆ ಎಂ ಎಫ್ ಸಿ

ಹೊಸದುರ್ಗ .